ಹಳ್ಳಿಯ ಜನರು ದೊಡ್ಡ ಸಂಖ್ಯೆಯಲ್ಲಿ ಇಲ್ಲಿಗೆ ಬರ್ತಾ ಇದ್ದಾರೆ. ನಗರದಲ್ಲಿ ಕೊರೊನಾದಂಥ ಮಹಾ ಸಾಂಕ್ರಾಮಿಕ ಬಂದರೆ ಆ ಕೂಲಿಕಾರರು ಊರಿಗೆ ಹೋಗೋಕೆ ರೈಲು ಬಸ್ಸು ಏನೂ ಇಲ್ಲದೇ ಕಾಲ್ನಡಿಗೇಲೇ 300, 400 ಕಿಲೊಮೀಟರ್ ನಡ್ಕೊಂದು ತಮ್ಮ ಹಳ್ಳಿಗೆ ಹೋಗಬೇಕಾಯ್ತು. ಇತ್ತ ನಗರಗಳಲ್ಲೂ ನಾನಾ ಬಗೆಯ ಮಾಲಿನ್ಯ, ನೀರಿಗಾಗಿ, ಶಕ್ತಿಗಾಗಿ, ಓಡಾಟಕ್ಕಾಗಿ, ಉದ್ಯೋಗಕ್ಕಾಗಿ ಪರದಾಟ, ಗಿಡಮರಗಳ ನಾಶ, ಕೆರೆಗಳ ನಾಶ, ಭೂ ಒತ್ತುವರಿ... ಎಷ್ಟೆಂದರೆ ಉಪ್ಪಿನ ಉತ್ಪಾದನೆಯನ್ನೂ ನಾವು ಸಮುದ್ರದಂಚಿನ ಸಾಮಾನ್ಯರ ಕೈಯಿಂದ ಕಿತ್ತು ದೊಡ್ಡ ಕಂಪನಿಗಳಿಗೆ, ದೊಡ್ಡ ಯಂತ್ರಗಳಿಗೆ ಕೊಟ್ಟಿದ್ದೇವೆ.




ಮಗು: ಗಾಂಧೀಜಿ ಈಗ ಇದ್ದಿದ್ದರೆ ಮತ್ತೊಮ್ಮೆ ಉಪ್ಪಿನ ಸತ್ಯಾಗ್ರಹ ಆಗ್ತಾ ಇತ್ತಾ?

ಅವಳು: ಉಪ್ಪಿನ ಪ್ಯಾಕೆಟ್ ಮಾಡೋಕೆ ಯಂತ್ರಗಳ ಬದಲು ಸಾಲು ಸಾಲು ಮಹಿಳೆಯರಿಗೇ ಕೆಲಸ ಸಿಗ್ತಾ ಇತ್ತೊ ಏನೊ. ಆಗೆಲ್ಲ ಸೆಣಬಿನ ಚೀಲದಲ್ಲಿ ಉಪ್ಪು ಬರ್ತಾ ಇತ್ತು. ಸೆಣಬು ಬೆಳೆಯೋರಿಗೂ ಅನುಕೂಲ ಆಗಿತ್ತು. ಈಗಿನ ಹಾಗೆ ಪ್ಲಾಸ್ಟಿಕ್ ಮಾಲಿನ್ಯ ಅನ್ನೋದೇ ಇರ್ತಿರಲಿಲ್ಲ. ಈ ಯಂತ್ರಗಳು ಮನುಷ್ಯರನ್ನೂ ನಿಸರ್ಗವನ್ನೂ ಅತಿಯಾಗಿ ಶೋಷಣೆ ಮಾಡ್ತವೆ ಅಂತ ಗಾಂಧೀಜಿ ಬಲವಾಗಿ ನಂಬಿದ್ದರು. ಯಂತ್ರಗಳೂ ಶೋಷಣೆ ಮಾಡಬಾರದು, ದೊಡ್ಡವರು ಚಿಕ್ಕವರನ್ನು ಶೋಷಣೆ ಮಾಡಬಾರದು. ಶ್ರೀಮಂತರು ಬಡವರನ್ನ ಶೋಷಣೆ ಮಾಡಬಾರದು...

(ವೈಷ್ಣವ ಜನತೋ ತೇನೇ ಕಹಿಯೇ..... ಪ್ರಾರ್ಥನೆ ಇಲ್ಲಿ ಬರಬಹುದು)

ಅವನು: ಶೋಷಣೆಯ ಫಲವನ್ನು ಈಗ ಕಾಣ್ತಾ ಇದೇವಲ್ಲ! ಯಂತ್ರಗಳ ಅತಿಯಾದ ಬಳಕೆಯಿಂದ, ಯಂತ್ರಗಳಿಗೆ ಬೇಕಿದ್ದ ಪೆಟ್ರೋಲು–ಕಲ್ಲಿದ್ದಲಿನಂಥ ಪಳೆಯುಳಿಕೆ ಇಂಧನಗಳ ಅತಿ ಬಳಕೆಯಿಂದ ಇಡೀ ಭೂಮಿಗೇ ಸಂಕಷ್ಟ ಬಂದಿದೆ. ಸಂಕಷ್ಟ ಬಂದಿದೆ ಅನ್ನೋದನ್ನು ಎಲ್ಲ ರಾಷ್ಟ್ರಗಳೂ ಒಪ್ಪಿಕೊಂಡಿವೆ. ಭೂಮಿಯ ತಾಪಮಾನ ಜಾಸ್ತಿ ಆಗ್ತಾ ಇದೆಯಂತೆ. ಅತಿವೃಷ್ಟಿ, ಅನಾವೃಷ್ಟಿ, ಅತಿ ಸೆಕೆ,